ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರ ಸಚಿವರು)— ಸನ್ಮಾನ್ಯ ಅಧ್ಯಕ್ಷರೇ, ದಾವಣಗೆರೆ ಮೋತಿ ವೀರಪ್ಪ ಸರ್ಕಾರಿ ಪದವಿಪೂರ್ವ ಕಾಲೇಜು ಬಹಳ ಹಳೆಯದಾದ ಕಟ್ಟಡವನ್ನು ಹೊಂದಿದ್ದು, ಈ ವರ್ಷ ಭಾರಿ ಮಳೆ ಕಾರಣ ಕಟ್ಟಡಕ್ಕೆ ತೊಂದರೆಯಾಗಿದೆ. ಈ ವಿಷಯ ಸರ್ಕಾರಕ್ಕೆ ವರದಿಯಾಗಿದೆ. ಹಾಗೂ ಲೋಕೋಪಯೋಗಿ ಇಲಾಖೆಯ ಮುಖ್ಯ ಇಂಜಿನಿಯರ್ ಅವರು ಸ್ಥಳಕ್ಕೆ ಭೇಟಿ ಕೊಟ್ಟು, ಶಾಲಾ ಕಟ್ಟಡವನ್ನು ಉಪಯೋಗಿಸಲು ಅಪಾಯಕಾರಿ ಎಂದು ವರದಿ ಮಾಡಿರುವುದೂ ಸರ್ಕಾರದ ಗಮನಕ್ಕೆ ಬಂದಿದೆ. ಕೂಡಲೇ ಸ್ಥಳೀಯ ಶಾಲೆಗಳಿಗೆ ಇದನ್ನು ವರ್ಗಾಯಿಸುವ ಮೂಲಕ ಪರ್ಯಾಯ ವ್ಯವಸ್ಥೆ ಮಾಡಲು, ಶಿಕ್ಷಣ ಇಲಾಖೆಯ ಆಯುಕ್ತರಿಗೆ ಪತ್ರ ಬರೆಯಲಾಗಿದೆ, ಶಾಲೆಯಲ್ಲಿ ಬೆಲೆ ಬಾಳುವ ವಸ್ತುಗಳನ್ನು ಸುರಕ್ಷಿತವಾದ ಸ್ಥಳಕ್ಕೆ ಸಾಗಿಸುವಂತೆ, ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ. ಮುಂದುವರಿದು ಸದರಿ ಕಟ್ಟಡವನ್ನು ದುರಸ್ತಿ ಮಾಡಲು ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ಲೋಕೋಪಯೋಗಿ ಇಲಾಖೆಗೆ ತಿಳಿಸಲಾಗಿದೆ.

6. ಕಿತ್ತೂರು ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಇವರುಗಳ ಕಥೆಯನ್ನು ದೂರದರ್ಶನದಲ್ಲಿ ಪ್ರಸಾರ ಮಾಡುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ)— ಮಾನ್ಯ ಅಧ್ಯಕ್ಷರೇ, ಭಾರತದ ಸ್ವಾತಂತ್ರ್ಯ ಹೋರಾಟದ ಭವ್ಯ ಇತಿಹಾಸದಲ್ಲಿ ಕರ್ನಾಟಕದ ಜನತೆಯ ದಿವ್ಯ ಸ್ಮರಣೆಯಲ್ಲಿ ಉಳಿಯುವ ಹೆಸರುಗಳು–ಕಿತ್ತೂರು ರಾಣಿ ಚೆನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣ ಅಕ್ಟೋಬರ್ ತಿಂಗಳಿನೇ ದಿನಾಂಕ ರಾಣಿ ಚೆನ್ನಮ್ಮಾಜಿ ಜನ್ಮ ದಿನ. ಈ ವರ್ಷ ಆ ಪವಿತ್ರ ದಿನದಂದು ದೇಶಾದ್ಯಂತ 'ಕಿತ್ತೂರು ಚೆನ್ನಮ್ಮ' ಚಲನಚಿತ್ರ ದೂರದರ್ಶನದಲ್ಲಿ ಪ್ರಸಾರವಾಗಬೇಕು. ಕನ್ನಡದ ಧೀರ ಕುವರಿಯ ಕೆಚ್ಚಿನ ಕಥೆಯನ್ನು ನೋಡಬೇಕು. ಅದೇರೀತಿ ಸ್ವಾತಂತ್ರ್ಯ ಹೋರಾಟಗಾರ 'ಸಂಗೊಳ್ಳಿ ರಾಯಣ್ಣ' ನನ್ನು ಗಲ್ಲಿಗೇರಿಸಿದ ಸ್ಥಳದಲ್ಲಿ ರಾಷ್ಟ್ರೀಯ ಸ್ಮಾರಕ ನಿರ್ಮಾಣ ಆಗಬೇಕು.

ಈ ಎರಡು ಬೇಡಿಕೆಗಳು ಕನ್ನಡ ಜನಕೋಟಿಯ ಬಹು ಕಾಲದ ಹಂಬಲ, ಈ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು ಎಂದು ಸದನದಲ್ಲಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ವಿಚಾರದ ಬಗ್ಗೆ ಉತ್ತರವನ್ನು ತರಿಸಿಕೊಡುತ್ತೇನೆ.

7. ಬಂಟ್ವಾಳ ತಾಲ್ಲೂಕಿನಲ್ಲಿ ವಿದ್ಯುತ್ ಸಂಪರ್ಕ ವಿಳಂಬವಾಗಿರುವುದು

ಶ್ರೀ ಬಿ. ಎ. ಉಮರಬ್ಬ (ವಿಟ್ಲ)—ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿ ಅನೇಕ ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ತೀವ್ರ ವಿಳಂಬವಾಗುತ್ತಿದೆ. ಅಧಿಕಾರಿಗಳು ನಿಷ್ಠೆಯಿಂದ ದುಡಿಯುತ್ತಿದ್ದರೂ ವಿದ್ಯುತ್ ಸಾಮಗ್ರಿಗಳ ಕೊರತೆಯಿಂದ ಕೆಲಸಕಾರ್ಯಗಳು ವಿಳಂಬವಾಗುತ್ತಿವೆ ಎಂದು ನನ್ನ ತಿಳುವಳಿಕೆ. ಟ್ರಾನ್ಸ್‌ಫಾರಂಗಳ ಕೊರತೆಯಿಂದ ವುದು ಗ್ರಾಮಾದ ಅಮ್ಮೆಮ್ಮಾರ್, ನಾರ್ಶ ಸಜಿಪನಡು, ಅಮ್ಮುಂಜೆ ಪುಂಡಾವಡೆ ವಿದ್ಯುತ್ ಕ್ಷೀಣ ಸ್ಥಿತಿಯಲ್ಲಿದೆ. ತಕ್ಕಷ್ಟು ಪಯರ್‌ಗಳ ಸರಬರಾಜು ಇಲ್ಲದೆ ಹಲವಾರು ಕಡೆ ವಿದ್ಯುತ್ ಸಂಪರ್ಕ ಅರ್ಧದಲ್ಲಿ ನಿಂತಿದೆ. ನಾವೂರ ಕೋಟೆ, ಕುಂಡೇಲು, ಕುಂಟಾಕಳ ನರಿಕೊಂಬು ಇತ್ಯಾದಿ ಗ್ರಾಮಗಳಲ್ಲಿ ವಿದ್ಯುತ್ ಒದಗಿಸುವ ಕಾರ್ಯಕ್ರಮದಲ್ಲಿ ಕೇವಲ ಗ್ರಾಮ ಸಂಪರ್ಕವನ್ನು ಮಾತ್ರ ಲೆಕ್ಕಿಸದೆ ಗ್ರಾಮದೊಳಗಿನ ಪುಟ್ಟ ಹಳ್ಳಿಗೂ ವ್ಯಾಪಿಸಬೇಕು. ಬಂಟ್ವಾಳ ವಿದ್ಯುತ್ ಕಚೇರಿಗೆ ತಕ್ಷಣ ಅವರ ಬೇಡಿಕೆಗೆ ತಕ್ಕಷ್ಟು ಸಾಮಗ್ರಿಗಳನ್ನು ಒದಗಿಸಬೇಕು. ಮಾತೃವಲ್ಲಿ ಕೊರತೆ ಇರುವ ಸಿಬ್ಬಂದಿ ಕಾರ್ಮಿಕ ವರ್ಗವನ್ನು ಒದಗಿಸಿಕೊಡಬೇಕಾಗಿ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಉತ್ತರವನ್ನು ಮಾನ್ಯ ಉಮರಬ್ಬನವರಿಗೆ ತರಿಸಿಕೊಡುತ್ತೇನೆ.